Regd.No. M. 1299 || ಸತ್ಯಾನ್ನಾಸ್ತಿಪರೋಧರ್ಮಃ || ಬಿಡಿ ಪ್ರತಿ 3 ಪೈ

ಸತ್ಯವಾದಿ

ಆಫೀಸ್: ಚಾಮರಾಜ ಅಗ್ರಹಾರ ಮೈಸೂರು. ಪ್ರತಿ ಗುರುವಾರವೂ ಪ್ರಕಟಿಸಲ್ಪಡುವುದು ವಾರ್ಷಿಕ ಚಂದಾ ಅಂಚೆಯೆಜ್ಜೆ ಸೇರಿ ರೂ 1-8-0

ಸಂಪುಟ 7] ಮೈಸೂರು, ಗುರುವಾರ 12-19 ನೆ ಫೆಬ್ರವರಿ 1925 [ಸಂಚಿಕೆ 14-15

3 ನೇ ಪುಟದಿಂದ ಮುಂದುವರಿದುದು

ಯುರೆ ರಾಜನೀತಿ ವ್ಯೂಹದಲ್ಲಿಯಿಂದಲೂ ಆದ ಈ ತರಹದ ಕೆಲಸಕಾರ್ಯಗಳು ಭಾರತದ ರಾಜರಿಂದಾಳ್ವಡುವ ದೇಶೀಯ ರಾಜ್ಯಗಳಲ್ಲಿ, ಅದರಲ್ಲಿಯೂ ಮೈಸೂರು ಸಂಸ್ಥಾನದಂತಹ ಅಸಕ್ತಿ ವಿಸ್ತಾರವಾದ ರಾಜ್ಯದಲ್ಲಿ ಪ್ರಕಾಶವಾಗುತ್ತಿವೆಯೆಂದು ತಿಳಿದ ಪ್ರತಿಯೊಬ್ಬ ಭಾರತೀಯನು ಸಂತೋಷದಿಂದ ಉಬ್ಬಿದಿರಲಾರನೆಂದು ತಿಳಿಯುತ್ತೇನೆ. ಅಫೀಕೆ ಪ್ರಾಚೀನ ಕುಶಲತೆಗಳನ್ನೊಳಗೊಂಡಿರುವದರಲ್ಲಿ ಅಗ್ರಾಸನವನ್ನು ಪಡೆದಿರುವ ಹಿಂದೂದೇಶದ ಈ ಭಾವವು ವಿಜ್ಞಾನಶಾಸ್ತ್ರದಲ್ಲೂ ಇತರ ವಿಧದ ಕುಶಲತೆಗಳಲ್ಲೂ ಮಾದರಿಯಾಗಿಯೂ ಮೊದಲನೆಯದಾಗಿಯೂ ಪರಿಣಮಿಸಿದುವುದು ಅದಂ ಸ್ಫೂರ್ತ್ಯವೇ ಸರಿ, ಶ್ರೀರಂಗಪಟ್ಟಣದಲ್ಲಿರುವ ಟೀವು ಸುಲ್ತಾನನ ಅರಮನೆಯಲ್ಲಿರುವ ಗೋಡೆಯ ಮತ್ತು ಚಾವಣಿಯ ಮೇಲೆ ಬರೆದಿರುವ ಚಿತ್ರಗಳ ಸೊಬಗು, ಬ್ರಿಟಿಷ್ ಪೂರ್ವದ ಕಲೆಗಳಲ್ಲಿ ಪ್ರಸಿದ್ಧವಾಗಿ ಈಗಲೂ ಬೆಳಗುತ್ತಿರುವ ದಕ್ಷಿಣ ಭಾರತ ಜಾತ್ರೆಯ ಕೆಲಸುಪ್ರಸಿದ್ಧ ವಿಷಯಗಳನ್ನು ಈ ಚಿತ್ರಗಳು ಈಗಲೂ ಜ್ಞಾಪಕಕ್ಕೆ ತರುತ್ತವೆ. ಶ್ರವಣಬಳಗೊಳದಲ್ಲಿರುವ ಜೈನರಗುರುವಿನ ಬಸ್ತಿಯು ಪ್ರೇಕ್ಷಕರ ಕಣ್ಣಿಗೆ ಅಹ್ಲಾದವನ್ನೂ ಭಾರತದ ಕುಶಲ ವಿದ್ಯೆಗಳಿಗೆ ಗೌರವವನ್ನೂ ಉಂಟುಮಾಡುತ್ತಾ ಕಂಗೊಳಿಸುತ್ತಿದೆ. ಒಂದು ಬಟ್ಟದನೆಲೆಯ ದೊಡ್ಡ ಪೀಠಕಲ್ಲಿನಲ್ಲಿ ಕೆತ್ತಲ್ಪಟ್ಟ 64 ಅಡಿ ಎತ್ತರವು ಭವ್ಯವಾಗಿ ಆಕಾಶವು ಬಹಳ ಮನೋಹರವಾಗಿ ಪ್ರಕಾಶಿಸುತ್ತಿದೆ, ಬಸ್ತಿಯು ಅನೇಕ ಶತಮಾನಗಳ ಹಿಂದೆ ಮಾಡಲ್ಪಟ್ಟಿದ್ದಾದರೂ ಕಾಲಮಾನದಿಯಿಂದ ಅದಕ್ಕೆ ಎಳ್ಳಷ್ಟಾದರೂ ನ್ಯೂನತೆ ಸಂಭವಿಸಿಲ್ಲ ಈಗ ಮಾಡಿದ್ದಂತೆ ಇದೆ. ದಕ್ಷಿಣದ ಕಾರ್ಯಕುಶಲತೆಗಳ ದೇವಮೈಭವದ ಪಾಲಕನಂತೆ ಬಹಳಮೈಲಿಗಳ ದೂರದಿಂದಲೂ ಕಂಗೊಳಿಸುತ್ತಿದೆ ಈ ಸಂಸ್ಥಾನದಲ್ಲಿ ಇನ್ನೂ ಅನೇಕ ಜೈನ ಮತ್ತು ಜೈನ ದೇವಸ್ಥಾನಗಳು ಭಾರತದ ಕುಶಲತೆಗಳ ಮಾದರಿಭೂತಗಳಾಗಿವೆ. ಆದರೆ ಇವುಗಳನ್ನು ಸಂದರ್ಶಿಸಲು ಕಾಲವಿಲ್ಲದಿದ್ದರೆ ಸನ್ನ ದುರ್ದೈವವೆಂದು ಭಾವಿಸುತ್ತೇನೆ ಈ ಸಂಸ್ಥಾನವು ತನ್ನ ರಾಜ್ಯದ ಆಯಕಟ್ಟಿಗೆ ಬ್ರಿಟಿಷ್ ರಾಜ್ಯಾಡಳಿತ ಈಡಾಗಿದ್ದರೂ ಅಲ್ಲಿನ ವಿಜ್ಞಾನಶಾಸ್ತ್ರದ ಪರಿಣತಿಗೂ ಮತ್ತು ಕೈಗಾರಿಕೆಗಳಿಗೆ ಅದರ ಸತ್ಯ ಕಾರಣವಾಗಿದೆ

ಈ ಸಣ್ಣ ಲೇಖನದಲ್ಲಿ ಮೈಸೂರಿನ ಆರ್ಥಿಕ, ಔದ್ಯೋಗಿಕ ವೈದ್ಯ ಮತ್ತು ಆರೋಗ್ಯ ರಾಜಕೀಯ ಸಿದ್ಧಾಂತಗಳ ವಿಚಾರಗಳ ವಿಷಯಗಳಲ್ಲಿ ಬಹಳ ಮುಂದುವರಿದಿರುವುದನ್ನು ಕುರಿತು ತಿಳಿಸಲು ಇಷ್ಟವಿಲ್ಲ. ಇವುಗಳ ಮುಂದುವರಿಕೆಯು ಎಲ್ಲರಿಗೂ ತಿಳಿದ ವಿಷಯವಾಗಿದೆ. ಅಥವಾ ಸಮಯದಲ್ಲಿ ಇನ್ನು ಎಲ್ಲಾ ವಿಷಯಗಳಲ್ಲಿ ಮುಂದುವರಿಯಲು ಬಾಕಿ ಇಲ್ಲವೆಂದಾಗ ಅಲ್ಲಿನ ಪ್ರಜೆಗಳಿಗೆ ಯಾವ ವಿಧವಾದ ಕೊರತೆಗಳಿಲ್ಲವೆಂದಾಗಲೀ ಈ ಲೇಖನದ ಅಭಿಪ್ರಾಯವಲ್ಲ ಆದರೆ ಘನಹೊಂದಿದ ಮಹಾರಾಜರವರು ಅವರ ಹಿತೋಪದೇಶಿಕರು ತಮ್ಮ ರಾಜ್ಯಭಾರವ ಈಗ್ಗಿಂತಲೂ ಚೆನ್ನಾಗಿ ಶ್ರಮಪಡಿಸುವುದರಲ್ಲಿಯೂ ಮತ್ತು ವೈಸರಾಯರನ್ನು ಬ್ರಿಟಿಷ್ ಮತ್ತು ಬೇರೆ ದೇಶೀಯ ರಾಜ್ಯಗಳಲ್ಲಿ ಮಾದರಿಯನ್ನಾಗಿ ಮಾಡುವದರಲ್ಲಿಯೂ ಹುಟ್ಟಾದ ಸ್ಪರ್ಧೆಯನ್ನು ವಹಿಸುತ್ತಾರಾಗಿ ನಂಬಿದ್ದೇನೆ.

ಭರತಖಂಡದ ಸುಪ್ರಸಿದ್ಧ ದೇಶಭಕ್ತರಾದ ಶ್ರೀಯುತ ಲಜಪತರಾಯರು ನಮ್ಮ ಸಂಸ್ಥಾನದ ವಿಷಯದಲ್ಲಿ ಈ ರೀತಿ ಅಭಿಪ್ರಾಯಪಟ್ಟಿರುವರು

ಇನಾಂ ಇನಾಂ!!

ರೇಷೆ ಪಂಜೆ ಆಟೋಮೋಹಿನಿ ಸೆಂಟ್.

ಈ ನಕ್ಷತ್ರದಲ್ಲಿ ಕೊಡ ಇಂಕಿ ಅದ್ದದೆ ಒರೆಯುವ ಫೌಂಟನ್ ಪೇನಾ ಇದಕ್ಕೆ ಕ್ಯಾರೆಟ್ ಭಂಗಾರದ ಮುಳ್ಳು ಹಾಕಿಸುತ್ತದೆ. ಇದರಿಂದ ಬರೆಯುವುದರಿಂದ ಅಕ್ಷರಗಳು ಮುತ್ತಿಗೆ ಹಾಗೆ ಒರೆಯುವುದು. ಈ ತಿಂಗಳು ಒಳಗೆ ತರಿಸಿಕೊಳ್ಳುವವರಿಗೆ ರೇಷ್ಮೆ ಪಂಜೆ ಆಟೋಮೋಹಿನಿ ಸೆಂಟ್ ಇನಾಮು ಸಹಿತ ರೂ 1—8—0.

ನಿಮಗೆ ಗಟ್ಟಿಯಾದ ಗಡಿಯಾರಗಳ ಬೇಕೊ ? ನಿಮಗೆ ಸುಲಭ ಖರೀದಿಗೆ ದೊರೆಯುವುದು.



ಇದು ನೋಡುವುದಕ್ಕೆ ಅದವಾಗಿಯೂ ಗಟ್ಟಿಯಾದ ಸಾಮಾನುಗಳಿಂದಲೂ ಮಾಡಲ್ಪಟ್ಟಿದೆ ಸರಿಯಾದ ಕಾಲವನ್ನು ತೋರಿಸುವುದು.

1. ಪಾಕೆಟ್ ಲೀವರ್ ಗಡಿಯಾರ ರೂ. 5-0-0.
2. ನಿಕ್ಕಲ್ ರೌಂಡ್ ರಿಸ್ಟ್‌ವಾಚ್ ಜಕ್ಕಳದ ಪಟ್ಟಿಸಹಿತ ರೂ. 5-8-0.
3. ನಿಕ್ಕಲ್ 4 ಮೂಲೆ ರಿಸ್ಟ್‌ವಾಚ್ ಜಕ್ಕಳದ ಪಟ್ಟಿಸಹಿತ ರೂ. 6-0-0.
4. ನಿಕ್ಕಲ್ 8 ಮೂಲೆ ರಿಸ್ಟ್‌ವಾಚ್ ಜಕ್ಕಳದ ಪಟ್ಟಿಸಹಿತ ರೂ. 7-0-0

ನಮ್ಮ ವಿಳಾಸ— ಹಾಜಿ ಕೆ ಸಿಂಗ್ ಅಂಡ್ ಕೂ ನಂ. 39 ಪಂಪಾಪತಿ ಮೊದಲಿ ಬೀದಿ, ಮಿಂಟ್‌ಹೌಸ್, ಬೆಂಗಳೂರು ಸಿ.

MYSORE GOVERNMENT LOAN BONDS

BOUGHT & SOLD

For Particulars apply to THE SEMAH ELISHA COMPANY MYSORE

Printed and published by M. S. Krishna Rao at the SATYAVADI Press, Myosre

೧೦೦೦ ರೂ ವಾಯಿಗಳ ಬಹುಮಾನ

ಲೋಕಪ್ರಸಿದ್ಧವಾದ ಸಾಲಾಮಿಸ್ರಿ ವೀರಬ್ಬಾ

ನಮ್ಮ ಟ್ರೇಡ್ ಮಾರ್ಕನ್ನು ನೋಡಿ ಈ ಔಷಧವನ್ನು ತೆಗೆದುಕೊಳ್ಳಿರಿ

ಇದರ ಸೇವನೆಯಿಂದ ವೀರ್ಯವು ನೀರಿಸಂತಿದ್ದರೂ ಸ್ವಪ್ನೇಂದ್ರಿಯ ವಾದರೂ ಸ್ತ್ರೀಸಂಗಕ್ಕೆ ನೊದಲೇ ಸ್ಖಲನವಾದರೂ ಮಿಶ್ರದೊಂದಿಗೆ ಹೋಗುತ್ತಿದರೂ, ದೋಷರಹಿತವಾಗಿ ಶರೀರಕ್ಕೆ ದಾರ್ಢ್ಯವನ್ನೂ ಆರೋಗ್ಯವನ್ನೂ ಉಂಟುಮಾಡುವದು ಅಜೀರ್ಣ, ಮಲಬದ್ಧತೆ, ವೆದನಬಲಹೀನತೆ, ಕೈಕಾಲು ಸೊಂಟ ನೋವುಗಳಿಗೆ ಇದು ದಿವ್ಯ ಔಷಧ. ಈ 'ಸಾಲಾಮಿಸ್ರಿ' ಎಂಬುವದು ಕಾಬೂಲ್ ಕಂದಹಾರವ್ಯಾಪ್ತಿಗಳಲ್ಲಿ ಬೆಳೆಯುತ್ತದೆ. ಈ ಔಷಧದಿಂದ ಗುಣಹೊಂದಿರುವ ಅನೇಕ ಮಹನೀಯರು ತಾವಾಗಿಯೇ ಅನೇಕದೇವಗಳಿಂದಲೂ, ಅಪ್ರಿಕ ಬರ್ಮಾ ಪೀನಾಂಗ್ ಸಿಲೋನ್ ಮತ್ತು ಇಂಡಿಯಾ ದೇಶದ ಎಲ್ಲಾ ಸ್ಥಳಗಳಿಂದಲೂ ನಮಗೆ ಯೋಗ್ಯತಾಪತ್ರಿಕೆಗಳನ್ನು ಕಳುಹಿಸಿರುವರು. ಇವುಗಳ ನಕಲನ್ನು ಯಾರುಬೇಕಾದರೂ ತರಿಸಿ ನೋಡಬಹುದು. ಇವುಗಳು ಸುಳ್ಳು ಎಂದು ನಿರ್ಧರಪಡಿಸುವವರಿಗೆ ಮೇಲೆಕಂಡ ಬಹುಮಾನವು ಕೊಡಲ್ಪಡುತ್ತೆ. ನಾವು ಹಾಗೆ ಕೊಡದೆ ನಿರಾಕರಿಸಿದಲ್ಲಿ ಕೋರ್ಟು ಮೂಲಕ ಅದನ್ನು ಪಡೆಯಬಹುದು. 1 ಡಬ್ಬವನ್ನು 15 ದಿವಸ ಸೇವಿಸಿದಲ್ಲಿ ಗುಣವು ಖಂಡಿತವಾಗಿ ತೋರಬಹುದು. 2 ಯಾ 3 ಡಬ್ಬಗಳು ಪೂರ್ಣವಾಗಿ ಗುಣವನ್ನುಂಟುಮಾಡುವವು. ಅನುಸಾನಪತ್ರಿಕೆಯು ಡಬ್ಬಿ ಸಂಗಡಲೇ ಇರುತ್ತೆ. ಹೆಸರು ವಿಳಾಸ ಚೆನ್ನಾಗಿ ತಿಳಿಯುವಂತೆ ಇರಬೇಕು

ಕ್ರಯ ಡಬ್ಬಿ 1 ಕ್ಕೆ ರೂ. 2—0—0. ಟಪ್ಪಾಲು ಖರ್ಚು ಗಿರಂದ 6 ಡಬ್ಬಿಗಳಿಗೆ 1 ಆಣೆ

ಏಜೆಂಟರು ಎಲ್ಲಾ ಸ್ಥಳಗಳಲ್ಲಿಯೂ ಅವಶ್ಯಕವಾಗಿ ಬೇಕಾಗಿದ್ದಾರೆ. ಧರ ತರಿಸಿ ನೋಡೀ, ಕೊಳ್ಳಬಹುದು.

ಟೆಲಿಗ್ರಾಫ್ ಅಡ್ರೆಸ್—ಮಿಸ್ರಿ, ಬೆಂಗಳೂರು ಸಿಟಿ

ವಿಳಾಸ ಡಿ. ವೀರಣ್ಣಾಚಾರ್, ಡೆಪ್ಯೂಟಿ ಸೈಕ್ಯಾಲಾಜಿಸ್ಟ್

ಸಾಲಾಮಿಸ್ರಿ ಮುರಬ್ಬಾ ಡಿಪೋ,

ಬೆಂಗಳೂರು ಸಿಟಿ.

ಎಳನೀರು.

—

ಇಂಡಿಯಾದೇಶದ ಅನೇಕ ಭಾಗಗಳಲ್ಲಿ ಎಳನೀರು ಒಂದು ಪಾನೀಯವಾಗಿ ಜನಗಳಿಂದ ಉಪಯೋಗಿಸಲ್ಪಡುವುದು. ಅದರಲ್ಲಿಯೂ ಪಶ್ಚಿಮಸಮುದ್ರತೀರ ಪ್ರಾಂತ್ಯಗಳಲ್ಲಿ ತೆಂಗಿನಮಂಗಳು ಹೇಳಿರವಾಗಿದ್ದ ಕಡೆಗಳಲ್ಲಿ ಹೆಚ್ಚಾಗಿ ಇದನ್ನು ಉಪಯೋಗಿಸುವರು. ಈ ಎಳನೀರಿನಲ್ಲಿ ದಣಿವಾರಿಸತಕ್ಕ ಗುಣವುಂಟು. ಬಹಳ ಶ್ರಮಪಟ್ಟ ಕಾಲದಲ್ಲಿ ಇದನ್ನು ಕುಡಿಯುವುದರಿಂದ ಸೋತುಹೋದ ಶರೀರಕ್ಕೆ ಉತ್ತೇಜನಕೊಡುವುದಲ್ಲದೆ, ಇದರಲ್ಲಿ ಸ್ವಲ್ಪ ಆಹಾರದ ಗುಣವೂ ಕಲೆತಿದೆ. ಅಲ್ಲದೆ ಊಟವಾದಮೇಲೆ ಎಳನೀರನ್ನು ಕುಡಿಯುವುದರಿಂದ ಅನೇಕಬಗೆಯ ಅಜೀರ್ಣವ್ಯಾಧಿಗಳು ಗುಣಹೊಂದುವುವು. ಕುಡಿಯುವದಕ್ಕೆ ಒಳ್ಳೇ ನೀರು ಶುದ್ಧವಾಗಿ ದೊರೆಯದ ಸ್ಥಳಗಳಲ್ಲಿ ಮತ್ತು ಕಾಲರಾ ಮೊದಲಾದ ಸೊಂಕು ಜಾಡ್ಯ ಎರಿಯ ಕಡೆಗಳಲ್ಲಿ ಎಳನೀರು ಸಿಕ್ಕುವುದಾದರೆ, ಅದನ್ನು ನಿರ್ಭಯವಾಗಿ ಕುಡಿಯಬಹುದು.

—

ಬಿಸಿನೀರಿನಲ್ಲಿ ಕಾಲುಗಳನ್ನು ಮುಳುಗಿಸಿಡುವದು.

—

ಹೀಗೆ ಮಾಡುವದರಿಂದ ರಕ್ತವು ಕಾಲಿನ ಕಡೆಗೆ ಎಳೆಯಲ್ಪಡುವುದು. ಅಕಸ್ಮಿಕವಾದ ತಲೆಶೂಲೆ ಮುಂತಾದ ಕೆಲವು ಅಸ್ವಸ್ಥತೆಗಳಿಗೆ ಒಡನೆಯೇ ಇದರಿಂದ ಪರಿಹಾರವುಂಟು. ಏಕೆಂದರೆ, ಬಿಸಿನೀರಿನಲ್ಲಿ ಕಾಲಿಟ್ಟು ಕುಳಿತರೆ, ತಲೆಯ ರಕ್ತವು ಕಾಲಿನ ಕಡೆಗೆ ಆಕರ್ಷಿಸಲ್ಪಡುವುದು ಇದರಿಂದ ಒಡನೆಯೇ ತಲೆನೋವು ನಿಂತುಹೋಗಬಹುದು. ಇದರಂತೆ ನರಗಳ ಸಂಬಂಧವಾದ ಬೇರೆ ಕೆಲವು ವ್ಯಾಧಿಗಳಿಗೂ ಇದು ಒಳ್ಳೇ ಚಿಕಿತ್ಸೆಯಾಗಿದೆ. ಮುಖ್ಯವಾಗಿ ರಕ್ತಸಂಚಾರಕ್ರಮದಲ್ಲಿ ಏನಾದರೂ ತೊಂದರೆಗಳು, ರಕ್ತವು ಗಡ್ಡೆ ಕಟ್ಟುವುದು, ತಲೆಯಲ್ಲಿ ಅಥವಾ ಕಂಠದೊಳಗೆ ಏನಾದರೂ ನೋವು, ಇವಕ್ಕೆಲ್ಲಾ ಮೇಲಿನ ಚಿಕಿತ್ಸೆಯು ಬಹಳ ಗುಣಕಾರಿಯೆನಿಸಿದೆ.

ಚರ್ಮಕ್ಕೆ ತಡೆಯುವಷ್ಟು ಉಷ್ಣಾಂಶವುಳ್ಳ ಬಿಸಿನೀರಿನಲ್ಲಿ, ಪಾದವೆಲ್ಲಾ ಸಂಪೂರ್ಣವಾಗಿ ಮುಳುಗುವವರೆಗೆ ಕಾಲಿಟ್ಟು, ನೀರು ತುಂಬಿದ ಪಾತ್ರೆಗಾಗಲೀ, ಕಾಲಿಗಾಗಲೀ ಗಾಳಿ ತಗಲದಂತೆ ಒಂದು ಕಂಬಳಿಯನ್ನು ಅಥವಾ ಪ್ಲಾನಲ ಬಟ್ಟೆಯನ್ನು ಹೊದಿಸಿಡಬೇಕು. ಹೀಗೆ 15 ನಿಮಿಷಗಳವರೆಗೆ ಬಿಸಿನೀರಿನಲ್ಲಿ ಕಾಲಿಟ್ಟಿದ್ದು, ಆಮೇಲೆ ಆ ಕಾಲುಗಳನ್ನು ಅರ್ಧನಿಮಿಷಗಳವರೆಗೆ ತಣ್ಣೀರಿನಲ್ಲಿ ಮುಳುಗಿಸಿಡಬೇಕು. ಅಥವಾ ಆ ಕಾಲುಗಳಮೇಲೆ ತಣ್ಣೀರನ್ನು ಬಿಟ್ಟು ಕೈಯ್ಯಿಂದಲಾದರೂ ಉಜ್ಜಬಹುದು. ಈ ಮೇಲೆ ಹೇಳಿದಂತೆ ಉಷ್ಣಜಲದಲ್ಲಿ ಕಾಲಿಡುವ ಚಿಕಿತ್ಸೆಯು ಬಲಹೀನತೆ, ಇತರವ್ಯಾಧಿ ಮುಂತಾದ ಸಂದರ್ಭಗಳಲ್ಲಿ ಕಠಿಣವಾದ ಚಿಕಿತ್ಸೆಗೆ ಮೈ ತಡೆಯದಿದ್ದಾಗ, ವೈದ್ಯಲ್ಲಿ ತಗ್ಗಿಹೋದ ಶಕ್ತಿಯನ್ನು ಹೆಚ್ಚಿಸುವುದಕ್ಕೆ ಉತ್ತಮವಾದ ಮಾರ್ಗವೆನಿಸುವುದು.

ಸೂರ್ಯ.

—

ಸೃಷ್ಟಿ, ಸ್ಥಿತಿ ಸಂಹಾರಗಳೆಂಬ ಮೂರುಬಗೆಯ ಶಕ್ತಿಗಳೂ ಸೂರ್ಯನಿಗಿರುವುದರಿಂದ ಪೂರ್ವಕಾಲದಿಂದಲೂ ನಮ್ಮವರು ಸೂರ್ಯನನ್ನು ಪಂಚದೈವರೂಪದಿಂದ ಭಾವಿಸಿ, ಕಾಲತ್ರಯದಲ್ಲಿಯೂ ಅವನನ್ನು ಉಪಾಸನೆ ಮಾಡುವರೆಂಬುದು ಎಲ್ಲರಿಗೂ ತಿಳಿದ ವಿಷಯವೇ! ವೇದದಲ್ಲಿ ಮತ್ತು ಸ್ಮೃತಿಗಳಲ್ಲಿ ಕೂಡ "ಅರೋಗ್ಯಂ ಭಾಸ್ಕರಾದಿಚ್ಛೇತ್" ಎಂಬಮಾತಾಗಿ ಆರೋಗ್ಯಕ್ಕೆ ಸೂರ್ಯನೇ ಅಧಿದೇವತೆಯೆಂದು ಹೇಳಿದೆ.

ಪ್ರಾಣಿವರ್ಗಗಳ ಮತ್ತು ಸಸ್ಯವರ್ಗಗಳ ಬೆಳವಣಿಗೆಗೆ ಅವಶ್ಯವಾದ ಉಷ್ಣವೂ ಬೆಳಕೂ ಆ ಸೂರ್ಯನಿಂದಲೇ ನಮಗೆ ಲಭಿಸಬೇಕು. ಮತ್ತು ಮಳೆ ಸುರಿಯುವುದೂ, ಗಾಳಿಗೆ ಚಲನವುಂಟಾಗುವುದೂ ಆ ಸೂರ್ಯಕಿರಣ ಸಹಾಯದಿಂದಲೇ! ಭೂಮಿಯಲ್ಲಿ ತಳದಿಂದ ಮೇಲೆ ಇರುವ ಒಲಾಂಶವನ್ನು ಜಣಗಿಸಿ ಆ ಭೂಮಿಯನ್ನು ನಮಗೆ ವಾಸಕ್ಕೆ ಯೋಗ್ಯವನ್ನಾಗಿ ಮಾಡುವುದು ಕೂಡ ಸೂರ್ಯಕಿರಣವೇ ಪ್ರಾಣಿಗಳ ಜೀವನಕ್ಕೆ ಅಧಾರವಾದ ಗಾಳಿ ಭೂಮಿ, ನೀರು ಇವುಗಳಲ್ಲಿರುವ ಅಶುದ್ಧವನ್ನೂ ವಿಷಕ್ರಿಮಿಗಳನ್ನೂ ನೀಗಿಸಿ ಶುದ್ಧಪಡಿಸುವುದೂ ಸೂರ್ಯಕಿರಣಗಳೇ.

ಎಲ್ಲಾ ಶೀತೋಷ್ಣ ಸ್ಥಿತಿಯಲ್ಲಿಯೂ ಸೂರ್ಯ ಪ್ರಕಾಶವೂ ಉಷ್ಣವೂ ಮಿತವಾಗಿ ನಮ್ಮ ಶರೀರಕ್ಕೆ ದೊರೆಯುವಂತೆ ಮಾಡುವುದು ಬಹಳ ಕ್ಷೇಮಕರವು. ಅತ್ಯುಷ್ಣ ಪ್ರದೇಶಗಳಲ್ಲಿಯೂ ಕೂಡ ಸೂರ್ಯಕಿರಣವು ವೈದ್ಯರ ಮೇಲೆ ಬೀಳುವುದಕ್ಕೆ ಆಗಾಗ ಅವಕಾಶ ಕೊಡುವುದರಿಂದ ಗುಣವೇ ಹೊರತು ಅಪಾಯದ ಭಯವಿಲ್ಲ. ಅತಿ ಉಷ್ಣ ದೇಶಗಳಲ್ಲಿಯೂ ಬಿಸಿಲಿನಲ್ಲಿದ್ದು ಕೆಲಸ ಮಾಡುವವರೇ ವಿಶೇಷ ಬಲಾಢ್ಯರಾಗಿಯೂ, ದೇಹಪುಷ್ಟಿಯುಳ್ಳವರಾಗಿಯೂ ಇರುವರು.

ಪ್ರಾಣಿಗಳ ಮತ್ತು ಸಸ್ಯಗಳ ಉತ್ಪತ್ತಿಗೂ ಆರೋಗ್ಯದ ಬಾಳಿಕೆಗೂ, ಅಭಿವೃದ್ಧಿಗೂ ಮಿತಿಮೀರಿ ಹೋದರೆ ಅವುಗಳ ನಾಶಕ್ಕೂ ಸೂರ್ಯಕಿರಣಗಳು ಕಾರಣಭೂತಗಳೆಂಬುದು ಮೇಲೆ ಹೇಳಿದ ಕಾರಣಗಳಿಂದಲೇ ನಿರ್ಧರಿಸಲ್ಪಡುವದು. ಸೂರ್ಯಾದಿಗಳಿಗೆ ಸೌಖ್ಯನೇ ಕಾರಣನೆಂದು ಶಾಸ್ತ್ರಗಳಲ್ಲಿ ಹೇಳಿದ ಕಾರಣವೂ ಇದೇ ಎಂದು ಊಹಿಸಬೇಕಾಗಿದೆ. (ಆರೋಗ್ಯ ಚಂದ್ರಿಕೆ

ಸರ್ಕಾರೀ ಆಡಳಿತಗಳ ಗೋತ್ವಾರೆ.

—

[ಪಬ್ಲಿಸಿಟಿ ಆಫೀಸಿನಿಂದ]

ತುಮಕೂರು ಶಿರಾದ ಉರ್ದೂಬಾಲಕರ ಪಾಠಶಾಲೆಯು ಆಡಳಿತವನ್ನು ನೋಡಿಕೊಳ್ಳುವದಕ್ಕಾಗಿ 15 ಮಂದಿ ದೊಡ್ಡಮನುಷ್ಯರನ್ನು ಸೇರಿಸಿ ಒಂದು ಕಮಿಟಿಯನ್ನು ಮೂರು ವರುಷಗಳ ಮಟ್ಟಿಗೆ ಸರ್ಕಾರದವರು ನೇಮಕಮಾಡಿರುತ್ತಾರೆ.

ಹಾರುವನಹಳ್ಳಿಯ ಒಳಿಯಲ್ಲಿಯೂ ಆದಕ್ಕೆ ಸಮೀಪದ ಪ್ರದೇಶದಲ್ಲಿಯೂ ಒಂದು ಕಾಡಾನೆಯು ಕಬ್ಬಿನ ಹೈರಿಗೂ ಇತರ ಬೆಳೆಗಳಿಗೂ ಬಹು ನಷ್ಟವನ್ನುಂಟು ಮಾಡುತ್ತಿದೆಯೆಂದು ಕಡೂರು ಡಿಸ್ಟ್ರಿಕ್ಟಿನ ಡೆಪ್ಯೂಟೀ ಕಮಿಷನರವರು ವಂದಿ ನೂಡಿ, ಅದು ದುಷ್ಟಮೃಗವೆಂದು ಪ್ರಸಿದ್ಧಪಡಿಸಿ ಅದನ್ನು ಕೊಲ್ಲುವದಕ್ಕೆ ಅನುಜ್ಞೆಯನ್ನು ಕೊಡಬಹುದೆಂದು ಶಿಫಾರಸು ಮಾಡಿದಾರೆ. ಈ ಶಿಫಾರಸನ್ನು ಫಾರೆಸ್ಟ್‌ಗಳ ಕಲೆಕ್ಟರ್‌ವರು ಅನುಮೋದಿಸಿದಾರೆ ಮತ್ತು ಆನೆಯನ್ನು ನಾಶಪಡಿಸುವ ವ್ಯಕ್ತಿಯನುಷ್ಯನಿಗೆ 500 ರೂಪಾಯಿಗಳನ್ನಾಗಲಿ ಅಥವ ಆನೆಯ ದಂತ ಮತ್ತು ಕೋರದಂತಗಳನ್ನಾಗಲಿ ಬಹುಮಾನವಾಗಿ ಕೊಡಲಾಗುವದು. ಸದರಿ ಆನೆಯನ್ನು ಕೊಲ್ಲುವಬಗ್ಗೆ ಲೈಸೆನ್ಸನ್ನು ಕೊಡುವಂತೆ ಕಡೂರು ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಗೆ ಅಧಿಕಾರಕೊಟ್ಟ ಒಂದು ಹುಕುಂ ಸಾದರಂತಾಗಿದೆ.

ಈ ತಿಂಗಳ 15 ನೆಯಿಂದ 21 ರ ವರೆಗೆ ಉತ್ತರ ಇಂಡಿಯಾದ ಪ್ರಸಿದ್ಧ ವೃಂದಾವನದಲ್ಲಿ ಸ್ವಾಮಿ ದಯಾನಂದ ಸರಸ್ವತಿಯವರ ಜನ್ಮಶತಾಬ್ದಿ ಮಹೋತ್ಸವವು ನಡೆಯುವುದು. ಆ ಸಮಾರಂಭಕ್ಕಾಗಿ, ಪ್ರಪಂಚದ ಎಲ್ಲಾ ಕಡೆಗಳಿಂದಲೂ ದಕ್ಷಿಣ ಆಫ್ರಿಕಾದಿಂದಲೇ ಸಾವಿರಾರು ಜನರು ಬರುತ್ತಾರೆಂಬ ನಿರೀಕ್ಷಣೆ ಇದೆ. ಆ ಕಾಲದಲ್ಲಿ ಪ್ರಪಂಚದ ಎಲ್ಲಾ ಮತ ಸಮಾಲೋಚನಾ ಸಮ್ಮೇಳನವನ್ನು ಬೊಂಬಾಯಿನ ಪ್ರಖ್ಯಾತ ವಿದ್ವಾಂಸರಾದ ಶ್ರೀ ಪಂಡಿತ ಬಾಲಕೃಷ್ಣಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ನಡೆಸಲು ಯೋಜನೆ ಇದೆ.

—

ಹಿಂದೂ ಮಠ ದೇವಸ್ಥಾನಗಳ ಮೇಲೆ ಕೈ ಮಾಡಲು ಹೊರಟಿದ್ದ ಮದ್ರಾಸ್ ಹಿಂದೂ ರಿಲಿಜಿಸ್ ಎಂಡೋವ್‌ಮೆಂಟ್ ಬಿಲ್ಲಿಗೆ ವೈಸರಾಯರವರು ತಮ್ಮ ಆಂಗೀಕಾರವನ್ನಿತ್ತಿರುತ್ತಾರೆ. ಈ ವಿಷಯದಲ್ಲಿ ವೈಸ್ರಾಯರ ಅಭಿಪ್ರಾಯದಮೇಲೆ ಪ್ರಶಂಸೆಗಳೂ ಖಂಡನೆಗಳೂ ಬೇರೆ ಬೇರೆ ಪಂಗಡಗಳಿಂದ ಹೊರಹೊರಡುತ್ತಲೂ ಇಂಡಿಯಾದೇಶದ ಸ್ಟೇಟ್ ಸೆಕ್ರೆಟರಿಗೆ ಜಕ್ಕನವರಿಯವರು ಇದನ್ನು ತಿರಸ್ಕರಿಸುವಂತೆ ತಂತೀಮೂಲಕ ವಿನಂತಿಗಳು ಹೋಗಲಾರಂಭವಾಗಿ ಹೊರಟಿವೆ.

—

ಕ್ಯಾಪ್ಟನ್ ದೆವಸ್ ಎಂಬಾತನು ತುಂಬಾ ಸಾಲಗಾರನಾಗಿ, ತನ್ನಲ್ಲಿ ಸ್ವಲ್ಪವೂ ಹಣವಿಲ್ಲದಿರಲು ತನ್ನ ಹೆಂಡತಿ ಮಕ್ಕಳನ್ನು ತಾನೇ ಕೊಂದು ತಾನೂ ವಿಷಕುಡಿದು ಪ್ರಾಣಬಿಟ್ಟನಂತೆ. ಆದರೆ ಚಿಕ್ಕಮಗು ಒಂದನ್ನು ಮಾತ್ರ ಜೀವಸಹಿತವಾಗಿ ತೊಟ್ಟಿಲಿನಲ್ಲೇ ಬಿಟ್ಟಿದ್ದನು ಈ ದುಃಖವಿಚಾರ ನಡೆದ ಮಾರನೇದಿವಸ ತಾನು ನಡೆಸುತ್ತಿದ್ದ ಒಂದು ನೊಲದ್ದಮೆ ಇವನಂತೆ ತೀರ್ಮಾನವಾಗಿ 53 ಸಾವಿರ ಪೌಂಡ್‌ಗಳು ಇವನಿಗೆ ಸಿಕ್ಕಿದಂತೆ ತಂತೀವರ್ತಮಾನ ಬಂದಿತಂತೆ.

—

ಕಲ್ಕತ್ತಾದಲ್ಲಿ ಫೂಲ್‌ಜಾರ್ ಎಂಬಾತನಿಗೆ ಒಂದು ಸಣ್ಣ ಕಳವಿಗಾಗಿ 3 ವರ್ಷ ಕಠಿಣಸಜೆ ವಿಧಿಸಲಾಯಿತು. ಹಿಂದೆ ಎಲ್ಲ ಸಲ ಜೈಲುವಾಸವಾಗಿದೆಯಂತೆ.

'ಸತ್ಯವಾದಿ'

—0—

ಗುರುವಾರ 19 ನೆ ಫೆಬ್ರವರಿ 1925

ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟ್.

ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟನ್ನು ಈಗಿರುವ ಸ್ಥಳದಿಂದ ಬದಲಾಯಿಸಿ 'ಅತಕರಾ ಕಛೇರಿ' ಯ ದಿಬಾರ್ ಹಾಲಿನಲ್ಲಿ' ಸಡೆಸಬೇಕಂಬದಾಗಿ ನೈಋತ್ಯದ ಕೆಲ ಅಮಲ್ದಾರರುಗಳ ಸರ್ಕಾರಕ್ಕೆ ಮೆ ಮೋರಂಡಂ ' ಬರೆದಿರುವ ರಂಬದಾಗಿಯೂ, ಅದಕ್ಕನುಕೂಲವಾಗಿಯೇ ಸಿಟಿ ಮ್ಯಾಜಿಸ್ಟ್ರೇಟರವರೂ ಅಭಿಪ್ರಾಯವನ್ನು ಕೊಟ್ಟಿರುವರೆಂಬದಾಗಿಯೂ ವರ್ತಮಾನ. ಇದು ನಿಜವಾದರೆ ಸರಕಾರವು ಪ್ರಜೆಗಳ ಸೌಕರ್ಯವನ್ನೂ ಈ ವಿಷಯದಲ್ಲಿ ತೆಗೆದುಕೊಳ್ಳಬೇಕಾದುದವಶ್ಯಕವೆಂದು ಹೇಳದಿರಲಾರೆವು ಮೇಲಾಗಿ, ಬಹಳ ಕಾಲದಿಂದಲೂ, ಜನಭೂತವಾದ ಪಟ್ಟಣದ ಮಧ್ಯಪ್ರದೇಶದಲ್ಲಿಯೇ ನಡೆದುಕೊಂಡು ಬರುತ್ತಿರುವ ಕೋರ್ಟನ್ನು ಪ್ರಜೆಗಳ ಅನುಕೂಲ್ಯತೆಗೆ ಬಾಧಕಬರುವಂತೆ ಬದಲಾಯಿಸಿ ದೂರಕ್ಕೆ ಸಾಗಿಸುವದು ಸಾಧುವಲ್ಲವೆಂದೂ ಕಾಯ್ದೆಯ ಅಭಿಪ್ರಾಯಕ್ಕಿಂತಲೂ ಕಕ್ಷಿಗಾರರ ಅಭಿಪ್ರಾಯವೇ ಈ ವಿಷಯದಲ್ಲಿ ಪ್ರಧಾನವೆಂದೂ, ಹೊರಗಡೆಯ ಮೊಖದ್ದಮೆಗಳಿಲ್ಲದೆ ಕೇವಲ ಪಟ್ಟಣದ ಮೊಖದ್ದಮೆಗಳೇ ನಡೆಯುವುದೇ ಆದರೆ ಕೋರ್ಟ್ ಪಟ್ಟಣದ ಮಧ್ಯಪ್ರದೇಶದಲ್ಲಿರುವುದೇ ಪ್ರಜೆಗಳಿಗೆ ಅನುಕೂಲವೂ, ಪಟ್ಟಣಕ್ಕೆ ಭೂಷಣವೂ ಆಂಬೆಂದು ಒತ್ತಿಹೇಳದಿರಲಾಗುವುದಿಲ್ಲ ಆಂತು ಈ ವಿಷಯದಲ್ಲಿ ಸರಕಾರವು ಚೆನ್ನಾಗಿ ಯೋಚಿಸಿ ಕೆಲಸಮಾಡುವುದು ಉತ್ತಮವೆಂದು ತಿಳಿಸುವುದು ನಮ್ಮ ಕರ್ತವ್ಯವೆಂದು ಭಾವಿಸಿ ಸಾಜಿಸಿರುತ್ತೇವೆಯಲ್ಲದೆ ಇದೇ ವಿಚಾರದಲ್ಲಿ ಸರಕಾರದ ಅಭಿಪ್ರಾಯವನ್ನೂ ತಿಳಿಯಲಾಶಿಸುತ್ತೇವೆ

ದೇಶಭಕ್ತ ಲಜಪತರಾಯರವರು ಮತ್ತು ವೈಸರಾಯರಿಗೆ ಅವರ ಭೇಟಿ.

ವೈಸರಾಯರು ದೇಶವನ್ನು ಬಹಳ ದಿವಸಗಳಿಂದ ನೋಡಬೇಕೆಂದಿದ್ದ ಕುತೂಹಲವು ಬೆಳಗಾಂ ಕಾಂಗ್ರೆಸ್ಸಿನ ದೆಸೆಯಿಂದ ದೂರೆಯಿತು. ಅಲ್ಲಿಯ ಮಹತ್ವವನ್ನು ಕಂಡು ಮತ್ತು ಈಗಿನ ಮೇಲಂತೂ ನಮ್ಮ ಭಾರತದೊಳಗಿನ ದೇಶೀಯ ರಾಜ್ಯದೊಳಗೆ ನಾನಿರುವೆನೆಂಬ ಭಾವನೆಯು ನನಗೆ ಬಹಳ ಸಂತೋಷವನ್ನುಂಟುಮಾಡಿತು. ನಾನು ಸ್ವಭಾವತಃ ಪ್ರಜಾಪಕ್ಷಪಾತಿ ಮತ್ತು ಹಿಂದು ಮೇಲೆ ರಾಜರೊಳ್ಳಿ ನನಗೆ ರಾಜರಲ್ಲಿ ಪ್ರೀತಿ ಇರುವುದಿಲ್ಲ. ಯಾತಕ್ಕೆಂದರೆ, ವಂಶ ಪಾರಂಪರ್ಯವಾಗಿ ಬಂದಕಕ್ಕೆಂದು ಮಾತ್ರ ತಮ್ಮ ದೊರೆತನದ ಶ್ರೇಷ್ಠಾಧಿಕಾರವನ್ನು ನಡೆಸುತ್ತಾರೆ.

ಆದರೂ ನಮ್ಮ ದೇಶದ ಅಭ್ಯುದಯಕ್ಕೆ ಕಾರಣ ಭೂತರಾದ ಅನೇಕ ರಾಜರುಗಳ ಸಂತತಿಯ ವ್ಯಕ್ತಿವಿಶೇಷತೆ. ಇದರಲ್ಲಿ ಈ ಸಂಸ್ಥಾನವು ಭಾರತದ ಎಲ್ಲಾ ದೇಶೀಯ ಸಂಸ್ಥಾನಗಳಲ್ಲಿಯೂ ಅಲ್ಲದೆ ಬ್ರಿಟಿಷ್ ಹಿಂದೂದೇಶದಲ್ಲಿಯೂ ಕೂಡ ಅಗ್ರಾಸನ ಪ್ರಾಮುಖ್ಯತೆಯನ್ನು ಪಡೆದಿದೆ. ಶಕ್ತರಾಗಿಯೂ, ಸಜ್ಜನರಾಗಿಯೂ, ನೀತಿಶಾಸ್ತ್ರ ಕೋವಿದರಾಗಿಯೂ, ಸ್ವಾಮಿಭಕ್ತಿಪುಳ್ಳವರಾಗಿಯೂ ಇದ್ದು ಪದವಿಗೆ ಬರುತ್ತಿರುವ ದಿವಾನರುಗಳ ಸ್ವಾಭಾವಿಕ ಶಕ್ತಿಯನ್ನು ರಾಜ್ಯಕ್ಕೆ ಉಪಯೋಗಿಸಿ ಅದರಿಂದ ಪ್ರಜೆಗಳ ಸೌಕರ್ಯವೊಂಯ್ದುವ ರಾಜ್ಯದ ಹುಟ್ಟುವಳಿಯನ್ನು ಜಾಸ್ತಿಮಾಡುವ ಅದ್ವೈತ ಕೃಷ್ಣ ಬುದ್ಧಿಯೇ ಕಾರಣವೆಂದು ಹೇಳಬಹುದು. ಇದರಲ್ಲಿ ಶಿವಸಮುದ್ರದ ಕಾವೇರಿಯ ಜಲಪಾತವು ವಿದ್ಯುಚ್ಛಕ್ತಿಯ ರೂಪದಲ್ಲಿ ಬಹಳ ಸಹಾಯಮಾಡಿದೆ. ಶಕ್ತಿವಂತ ದಿವಾನ್ ಶೇಷಾದ್ರಯ್ಯನವರ ಈ ಕೆಲಸಕ್ಕೆ ಪ್ರಾರಂಭ ಮಾಡಿದಾಗ್ಯೆ ಬ್ರಿಟಿಷ್ ದೇಶದ ವಿಶ್ವಶಾಸ್ತ್ರಜ್ಞ ಸಹಾಯವಂಡಲು ಹಿಂತೆಗೆದರು ದಿವಾನರವು ಪರದೇಶಗಳಿಂದ ಸಹಾಯವನ್ನು ಹೊಂದಿ, ಆ ಕೆಲಸವನ್ನು ದಕ್ಷತೆಯಿಂದ ಸಂಪೂರ್ಣಮಾಡಿದರು ಕಾವೇರಿ ಜಲಪಾತದ ಏರ್ಪಾ ಸರ್ಕಾರಕ್ಕೆ 1 ಕೋಟಿಯೂ ಮತ್ತು 23 ಲಕ್ಷ ರೂಪಾಯಿಗಳು. ಇದರಿಂದ ನಿವ್ವಳ ಆದಾಯವು 23 ಲಕ್ಷ ರೂಪಾಯಿಗಳು. ಈ ವಿದ್ಯುಚ್ಛಕ್ತಿಯು ಕೋಲಾರದ ಚಿನ್ನದ ಗಣಿಗಳಲ್ಲಿ ಕೆಲಸಮಾಡುವ ಬ್ರಿಟಿಷ್ ಕಂಪೆನಿಗಳಿಗೆ ಬಹಳ ಪ್ರಯೋಜನಕಾರಿಯಾಗಿದೆ. ಈ ಪರದೇಶದ ಕಂಪೆನಿಗಳು ಈ ಶಕ್ತಿಯ ಸಹಾಯದಿಂದ ಅಸಾಧಾರಣವಾದ ಲಾಭವನ್ನು ಪಡೆಯುತ್ತಿದಾರೆ. ಇವರ ಉತ್ಪತ್ತಿಯು ಸುಮಾರು ಸ್ವಲ್ಪ ಹೆಚ್ಚು ಕಡಮೆ ಸ ಸ್ಥಾನದ ಹುಟ್ಟುವಳಿಯಷ್ಟೇ ಆಗುವುದು. ಕೆಲವು ಜನ ಕಂಪು ಜರು ಹೊರತು ಈ ವಿದ್ಯುಚ್ಛಕ್ತಿಯ ಕಾರ್ಖಾನೆಗಳಲ್ಲಿ ಕೆಲಸಮಾಡುವರು ನಮ್ಮ ಹಿಂದೂದೇಶೀಯರೆ! ಭಾರತೀಯರ ಕಾರ್ಯದಕ್ಷತೆಯನ್ನು ತಿಳಿಸಲು ಕಟ್ಟಲ್ಪಡುತ್ತಿರುವ ಕೃಷ್ಣರಾಜ ಸಾಗರವು ಹಿಂದು ಮಹತ್ವದ ಕೆಲಸವಾಗಿದೆ. ಪ್ರಪಂಚದಲ್ಲಿ ನೀರು ಶೇಖರಿಸುವ ಕಟ್ಟೆಗಳಲ್ಲಿ ಎರಡನೆಯದೆನಿಸಿರುವ ಈ ಕಟ್ಟೆಯ ರಚನೆಯು ಅಭಿಪ್ರಾಯವೂ ಮತ್ತು ಕಟ್ಟೋಣವೂ ಹಿಂದೂದೇಶದ ತೀಕ್ಷ್ಣಬುದ್ಧಿ ಕುಶಲತೆಯಿಂದಲೇ ಆದುದು. ಆ ಕೆಲಸದಲ್ಲಿ ಇದುವರೆಗೆ ಒಬ್ಬ ಕೆಂಪುಜನದವರ ಸಹಾಯವೂ ಇರುವುದಿಲ್ಲ. ಆ ಸಾಗರವು ಉದ್ದದಲ್ಲಿ 2 ಮೈಲಿಗಳೂ ವಿಸ್ತಾರದಲ್ಲಿ 124 ಅಡಿಗಳೂ ವಿಸ್ತರಿಸಿದೆ. ಕೈಗಾರಿಕೆಯು ಮುಂದುವರಿಕೆ :

ಶಿಲ್ಪಶಾಸ್ತ್ರದಲ್ಲೊಂದಲ್ಲದೆ ಮೈಸೂರು ಸಂಸ್ಥಾನವು ಕೈಗಾರಿಕೆಯಲ್ಲೂ ಕೂಡ ಮುಂದುವರಿಯಲು ಪ್ರಯತ್ನಪಡುತ್ತಿದೆ. ಇದರಲ್ಲಿ ಮುಖ್ಯವಾದುದು ಗಂಧದೆಣ್ಣೆಯ ಕಾರ್ಖಾನೆ. ನನಗೆ ಇದ್ದ ಅತ್ಯಲ್ಪಾವಧಿಯಲ್ಲಿ ಅದನ್ನು ಸಹಾ ನೋಡಿದೆನು. ಬೆಂಗಳೂರಿನಲ್ಲಿ ಶ್ರೀಮಂತ ಜೆ ಎಸ್ ತಾತಾರವರ ಔದಾರ್ಯತನದಿಂದ ಪ್ರಾರಂಭಿಸಲ್ಪಟ್ಟು ಪ್ರಸಿದ್ಧಿಹೊಂದಿರುವ ವಿಜ್ಞಾನಶಾಸ್ತ್ರಮಂದಿರವೂ ಇರುವುದು. ಭಾರತೀಯರ ಔದಾರ್ಯದಿಂದಲೂ ಭಾರತೀಯರ ಬುದ್ಧಿಶಕ್ತಿಯಿಂದಲೂ ಭಾರತೀ

Watch This Space

Next Week